ಓ ಎಸ್ ನಂಃ 138-17
ಪಿ ಡಬ್ಲ್ಯೂ ಃ 1

ದಿಃ 29-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಡಿ ಜಿ ವಕೀಲರಿಂದ

29. ಪ್ರತಿವಾದಿ ಬಿ ಷೆಡ್ಯೂಲ್ ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಅದನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಾವು ಸರೋಜಮ್ಮರವರಿಂದ ಆಸ್ತಿಯನ್ನು 2004 ರಲ್ಲಿ ಪಡೆದಿದ್ದು ದಿನಾಂಕ ಮತ್ತು ತಿಂಗಳು ನೆನಪಿಲ್ಲ. ಸರೋಜಮ್ಮರವರು ಬರೆದುಕೊಟ್ಟ ಕ್ರಯಪತ್ರದಲ್ಲಿ ಏನು ಒಕ್ಕಣೆ ಇದೆ ಗೊತ್ತಿಲ್ಲ. ಸರೋಜಮ್ಮರವರಿಂದ ಪ್ರತಿವಾದಿ 4 ಎಕರೆ ಮತ್ತು 1 ಎಕರೆಯ ಎರಡು ಪ್ರತ್ಯೇಕ ಜಮೀನುಗಳನ್ನು ಖರೀದಿ ಮಾಡಿರುತ್ತಾರೆ. 4 ಎಕರೆ ಜಮೀನಿನ ಪೂರ್ವಕ್ಕೆ ಸರ್ವೆ ನಂ 63 ಮುನಿಸ್ವಾಮಪ್ಪರವರ ಆಸ್ತಿ ಮತ್ತು ಅರಣ್ಯ ಇದೆ ಪಶ್ಚಿಮಕ್ಕೆ ಕೆ ಟಿ ವಿಶ್ವನಾಥ್ ರವರ ಆಸ್ತಿ ಇದೆ. ಉತ್ತರಕ್ಕೆ ಅರಣ್ಯ ಇದೆ. ದಕ್ಷಿಣಕ್ಕೆ ನಂಜಮ್ಮರವರ ಆಸ್ತಿ ಇದ್ದು ಈಗ ಕೆ ಟಿ ವಿಜಯ್ ಕುಮಾರ್ ರವರ ಆಸ್ತಿ ಇದೆ. ಪೂರ್ವಕ್ಕೆ ಸರ್ವೆ ನಂ 63 ಮತ್ತು ಮುನಿಸ್ವಾಮಪ್ಪರವರ ಆಸ್ತಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಬದಲಿಗೆ ಅಲ್ಲಿ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಕೆ ಟಿ ವಿಶ್ವನಾಥ್ ಹಾಗೂ ಅರಣ್ಯ ಇದೆ ಎಂದರೆ ಸ್ವಲ್ಪ ಆಸ್ತಿ ಕೆ ಟಿ ವಿಶ್ವನಾಥ್ ರವರ ಆಸ್ತಿ ಇದ್ದು ಮತ್ತು ಅರಣ್ಯ ಇದೆ ಎಂದು ಹೇಳುತ್ತಾರೆ. ಉಳಿದ 1 ಎಕರೆ ಜಮೀನು ಸರ್ವೆ ನಂ 62/1 ರಲ್ಲಿ ಬರುತ್ತದೆ. ಇದರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಮೊದಲು ಕೆಟಿ ರಾಜಶೇಖರ್ ರವರ ಆಸ್ತಿ ಇದ್ದು ಈಗ ಸುಕುವೇರ್ ರವರ ಆಸ್ತಿ ಇರುತ್ತದೆ, ಉತ್ತರಕ್ಕೆ ರಸ್ತೆ ಮತ್ತು ಗ್ರಾಮ ಬರುತ್ತದೆ, ದಕ್ಷಿಣಕ್ಕೆ ಹಳ್ಳ ಇದೆ. ಪೂರ್ವಕ್ಕೆ ರಸ್ತೆ ಇಲ್ಲ ದಾರಿ ಇರುತ್ತದೆ ಎಂದರೆ ರಸ್ತೆ ದಾರಿ ಒಂದೇ ಇರುತ್ತದೆ ಎಂದು ಹೇಳುತ್ತಾರೆ. ಪಶ್ಚಿಮಕ್ಕೆ ಕೆ ಟಿ ರಾಜಶೇಕರ್ ರವರ ಜಮೀನು ಇದೆ ಎಂದರೆ ಮೊದಲು ಇದ್ದು ಈಗ ಸುಕುವೇರ್ ರವರು ಅನುಭವಿಸುತ್ತಿದ್ದಾರೆ ಎಂದು ಹೇಳುತ್ತಾರೆ. ಮೊದಲು ಕೆ ಟಿ ರಾಜಶೇಕರ್ ರವರ ಆಸ್ತಿ ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ ಎಂದರೆ ನಮ್ಮ ವಿಭಾಗ ಪತ್ರದಲ್ಲಿ ನಮೂದು ಇದೆ ಎಂದು ಹೇಳುತ್ತಾರೆ. ಉತ್ತರಕ್ಕೆ ರಸ್ತೆ ಮತ್ತು ಗ್ರಾಮ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಬದಲಿಗೆ ಗ್ರಾಮಠಾಣ ಬರುತ್ತದೆ ಎಂದರೆ ಸರಿಯಲ್ಲ.

30. ಬಿ ಷೆಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿ ನಿರ್ಮಿಸಿದ ಬೋರ್ವೆಲ್, ಪಂಪ್ ಹೌಸ್, ತಂತಿಬೇಲಿ ಮತ್ತು ಕಲ್ಲುಕುಜ್ಜ ಇರುತ್ತದೆ ಎಂದರೆ ಪಂಪ್ ಹೌಸ್ ಮಾತ್ರ ಇರುತ್ತದೆ ಎಂದು ಹೇಳುತ್ತಾರೆ. ದಿನಾಂಕಃ 04-02-2014 ರಂದು ಪ್ರತಿವಾದಿ ಬಿ ಷೆಡ್ಯೂಲ್ ಆಸ್ತಿಯಲ್ಲಿ ನಿಸರ್ಗ ಬೋರ್ ವೆಲ್ ರವರಿಂದ 62 ಸಾವಿರ

ರೂಗಳಿಗೆ ಬೋರ್ ವೆಲ್ ಹಾಕಿಸಿರುತ್ತಾರೆ ಎಂದರೆ ಹಾಕಿಸಿರಬಹುದು ನಾವು ಬೆಂಗಳೂರಿನಲ್ಲಿ ಇರುತ್ತೇವೆ ನಮಗೆ ಗೊತ್ತಿಲ್ಲದ ಹಾಗೆ ಹಾಕಿಸಿರುತ್ತಾರೆ ಎಂದು ಹೇಳುತ್ತಾರೆ. ದಿನಾಂಕಃ **05-02-2014** ರಲ್ಲಿ ಪ್ರತಿವಾದಿ ಬಿ ಷೆಡ್ಯೂಲ್ ಆಸ್ತಿಯಲ್ಲಿ ಇನ್ನೊಂದು ಬೋರ್ ವೆಲ್ ಹಾಕಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಬೋರ್ ವೆಲ್ ಗೆ ಕರ್ನಾಟಕ ವಿದ್ಯುತ್ ನಿಗಮದವರು ಪ್ರಮಾಣ ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ಕೊಟ್ಟಿರಬಹುದು.

**31.** ಪ್ರತಿವಾದಿ ಭೂಮಿ ಅಭಿವೃದ್ಧಿ ಮಾಡಲು ಪ್ರಾರಂಭ ಮಾಡಿದ್ದರಿಂದ ನಾವು ತಾವರೆಕೆರೆ ಪೋಲಿಸ್ ಠಾಣೆಯಲ್ಲಿ ದಿನಾಂಕಃ **20-06-2017** ರಂದು ದೂರನ್ನು ದಾಖಲಿಸಿರುತ್ತೇವೆ. ನಾವು ಪ್ರತಿವಾದಿಯ ವಿರುದ್ಧ ಸುಳ್ಳು ದೂರನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಬಿ ಷೆಡ್ಯೂಲ್ ಆಸ್ತಿಯಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದೆ ಇದ್ದರೂ ಆ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಎಡಿಎಲ್‌ಆರ್ ಜೊತೆ ಶಾಮಿಲಾಗಿ ಸುಳ್ಳು ಚಕ್ಕುಬಂದಿಯನ್ನು ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಡಿ ಸಿ ಯವರ ನ್ಯಾಯಾಲಯದಲ್ಲಿ ರಿವಿಜನ್ ಪಿಟಿಷನ್ ನಂ **4/20-21** ನ್ನು ಹೂಡಿರುತ್ತೇನೆ ಎಂದರೆ ನಿಜ ಅದನ್ನು ನನ್ನ ಪರವಾಗಿ ಆದ ಪೋಡಿಯ ವಿರುದ್ದ ಹೂಡಿದ್ದೆ ಎಂದು ಹೇಳುತ್ತಾರೆ. ಆ ಅರ್ಜಿ ಈಗ ಜೆ ಡಿ ಎಲ್ ಆರ್ ರವರ ಕಛೇರಿಗೆ ರವಾನೆಯಾಗಿರುತ್ತದೆ. ಅದು ಯಾವಾಗ ರವಾನೆಯಾಗಿರುತ್ತದೆ ಎಂಬುದನ್ನು ದಾಖಲೆಗಳನ್ನು ನೋಡಿ ಹೇಳಬಹುದು.

**32.** ಸರ್ವೆ ನಂ **62/1** ರ ವಿಸ್ತೀರ್ಣ **31.02** ಎಕರೆ ಇರುತ್ತದೆ. ಸರ್ವೆ ನಂ **62/1** ರ ವಿಸ್ತೀರ್ಣ **37** ಎಕರೆ **02** ಗುಂಟೆ ಇರುತ್ತದೆ ಎಂದರೆ ಆ ಬಗ್ಗೆ ದಾಖಲೆಗಳನ್ನು ನೋಡಿ ಹೇಳಬಹುದು. ಸರ್ವೆ ನಂ **62/2** ಯಾರ ಹೆಸರಿನಲ್ಲಿದೆ ಎಂದರೆ ದಾಖಲೆಗಳನ್ನು ನೋಡಿ ಹೇಳಬಹುದು. ಈ ಆಸ್ತಿಗಳ ಬಗ್ಗೆ ನನಗೆ ದಾಖಲೆ ನೋಡಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ **62/3** ರ ಒಟ್ಟು ವಿಸ್ತೀರ್ಣ ಎಷ್ಟು ಇದೆ ನಾನು ದಾಖಲೆ ನೋಡಿ ಹೇಳಬಹುದು. ಸರ್ವೆ ನಂ **62/3** ರಲ್ಲಿ **3** ಎಕರೆ ಇರುತ್ತದೆ ಎಂದರೆ ಆ ಆಸ್ತಿ ನನಗೆ ಸಂಬಂದಿಸಿದ್ದಲ್ಲ ಆದ ಕಾರಣ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ **62/4** ನನ್ನ ಆಸ್ತಿ ಅಲ್ಲ ಆದ ಕಾರಣ ಅದರ ವಿಸ್ತೀರ್ಣ ಗೊತ್ತಿಲ್ಲ. ಒಟ್ಟು **31** ಎಕರೆ ಎಂದು ಹೇಳುವ ಜಮೀನು ಉಳಿಕೆ **1** ಎಕರೆ **23** ಗುಂಟೆ ಇರುತ್ತದೆ ಎಂದರೆ ಈ ಬಗ್ಗೆ ನಾನು ದಾಖಲೆಗಳನ್ನು ನೋಡಿ ಹೇಳಬಹುದು. ಸರ್ವೆ ನಂ **62/1** ರಲ್ಲಿ ರಂಗಮ್ಮನ ಮಗ ಚಿಕ್ಕಣ್ಣರವರಿಗೆ **1** ಎಕರೆ **34** ಗುಂಟೆ ಇರುತ್ತದೆ ಎಂದರೆ ದಾಖಲೆ ನೋಡಿ ಹೇಳಬಹುದು. ಸರ್ವೆ ನಂ **62/1** ರಲ್ಲಿ **1** ಎಕರೆ **30** ಗುಂಟೆ ಸುಕುವೇರ್ ರವರಿಗೆ ಇರುತ್ತದೆ ಎಂದರೆ ದಾಖಲೆ ನೋಡಿ ಹೇಳಬಹುದು. ಸರ್ವೆ ನಂ **62/1** ರಲ್ಲಿ **8** ಎಕರೆ ಜಮೀನು ರಘುರಾಮಾಚಾರ್

ರವರ ಮಗ ಪುಷ್ಪಹಾಸ್ ಚಾರ್ ರವರಿಗೆ ಇರುತ್ತದೆ ಎಂದರೆ ದಾಖಲೆ ನೋಡಿ ಹೇಳಬಹುದು. ಸರ್ವೆ ನಂ 62/1 ರಲ್ಲಿ ಯಾರ್ಯಾರ ಹೆಸರಿಗೆ ಖಾತೆ ಮತ್ತು ಎಷ್ಟು ವಿಸ್ತೀರ್ಣಕ್ಕೆ ಖಾತೆ ಇರುತ್ತದೆ ಹಾಗೂ ಅವರಿಗೆ ಹೇಗೆ ಆಸ್ತಿ ಬಂದಿರುತ್ತದೆ ಅವುಗಳನ್ನು ದಾಖಲೆ ನೋಡಿ ಹೇಳಬಹುದು. ಇದನ್ನು ಹೊರತುಪಡಿಸಿ ಸರ್ವೆ ನಂ 62/1 ರಲ್ಲಿ ಉಳಿಕೆ ಜಮೀನು ಇದ್ದು ಅದು ಮೂಲ ಖಾತೆದಾರರ ಹೆಸರಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ದಾಖಲೆಯಲ್ಲಿ ಇದ್ದರೆ ಇರಬಹುದು. ಸರ್ವೆ ನಂ 62/1 ನ್ನು ಇನ್ನೊಂದು ಬಾರಿ ಅಳತೆ ಮಾಡಿಸಲು ನಿಮ್ಮದು ತಕರಾರು ಇದೆಯಾ ಎಂದರೆ ಈಗಾಗಲೇ ಅಳತೆ ಮಾಡಿಸಿದ್ದು ನ್ಯಾಯಾಲಯ ಆದೇಶ ಮಾಡಿದರೆ ಇನ್ನೊಂದು ಬಾರಿ ಅಳತೆ ಮಾಡಿಸುತ್ತೇನೆ ಎಂದು ಹೇಳುತ್ತಾರೆ.

33. ನೊಂದಾಯಿತ ಪಂಚಾಯ್ತಿ ಪಾಲುಪಟ್ಟಿಯಲ್ಲಿ ಸರ್ವೆ ನಂ 62/1 ರಲ್ಲಿ ಯಾರಿಗೆ ಎಷ್ಟು ಜಮೀನು ಹೋಗಿರುತ್ತದೆ ಅದನ್ನು ದಾಖಲೆ ನೋಡಿ ಹೇಳಬಹುದು. ನೊಂದಾಯಿತ ಪಾರಿಖತ್‌ನ ಆಧಾರದ ಮೇರೆಗೆ ನಕಾಶೆ ಆಗಿರುತ್ತದೆಯೋ ಇಲ್ಲವೋ ಗೊತ್ತಿಲ್ಲ.

34. ಪ್ರತಿವಾದಿ ತಮ್ಮ ಪ್ರತಿವಾದ ಪತ್ರದಲ್ಲಿ ನಾವು ಹೂಡಿರುವ ದಾವೆ ಸರಿಯಿರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ 62 ರಲ್ಲಿ 4 ಎಕರೆ ಮತ್ತು 1 ಎಕರೆ ಜಮೀನಿಗೆ ಪ್ರತಿವಾದಿಯೇ ಮಾಲೀಕರು ಹಾಗೂ ಸ್ವಾಧೀನದಾರರು ಇರುತ್ತಾರೆ ಎಂದರೆ ಸರಿಯಲ್ಲ. ಈ ಆಸ್ತಿಗಳಿಗೆ ಪ್ರತಿವಾದಿಯ ಹೆಸರಿಗೆ ಖಾತೆ ಮತ್ತು ಪಹಣಿ ಇರುತ್ತದೆ ಎಂದರೆ ಖಾತೆ ಇದ್ದು ಪಹಣಿ ಇರುವುದಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯ ಹೆಸರಿಗೆ ಪಹಣಿ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಹೊಸದಾಗಿ ಏನೋ ಆಗಿರುತ್ತದೆ ದಾಖಲೆ ನೋಡಿ ಹೇಳಬಹುದು. ಪ್ರತಿವಾದಿಯ ಆಸ್ತಿಯನ್ನು ನಾವೇ ಕೇಳಿದ್ದು ಪ್ರತಿವಾದಿ ಕೊಡಲು ನಿರಾಕರಿಸಿದ್ದರಿಂದ ನಮ್ಮ ಮತ್ತು ಅವರ ಮಧ್ಯೆ ವೈಮನಸ್ಸಿದ್ದು ಆ ಕಾರಣಕ್ಕಾಗಿ ದುರುದ್ದೇಶಪೂರ್ವಕವಾಗಿ ಈ ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಆದ ಕ್ರಯಪತ್ರದ ಆಧಾರದ ಮೇರೆಗೆ ನಕಾಶೆ ಮತ್ತು ಹಿಸ್ಸಾ ಪೋಡಿಯಾಗಿರುತ್ತದೆ ಎಂದರೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.